

ಮಾಡಿರುವ, ಎಂ.ಕಾಂ ಡಬಲ್ ಡಿಗ್ರಿ ಮಾಡಿರುವ ರೂಪಾ ಅಯ್ಯರ್ 'ಇಂಡಿಯಾ ಕ್ಲಾಸಿಕ್ ಆರ್ಟ್ಸ್' ಎನ್ನುವ ಕಂಪೆನಿ ಮಾಡಿ ಸಿನಿಮಾಗಳನ್ನು ನಿರ್ಮಿಸುತ್ತಿದ್ದಾರೆ. ಅವರ 'ಮುಖಪುಟ' ಚಿತ್ರಕ್ಕೆ ಮಾತ್ರ ಅಮೆರಿಕದ ನಾರಾಯಣ ಹೊಸಮನಿ ಎನ್ನುವವರು ಸಹನಿರ್ಮಾಪಕರಾಗಿದ್ದರು. ಉಳಿದದ್ದೆಲ್ಲ ಸ್ವಂತ ಗಳಿಕೆಯ ಚಿತ್ರಗಳೇ.

'ಹೆಣ್ಣುಮಕ್ಕಳ ಮೇಲೆ ನಿರ್ಮಾಪಕರಿಗೆ ಭರವಸೆ ಇಲ್ಲ ಎನ್ನುವುದು ನಿಜ. ಆದರೆ ಎಲ್ಲರೂ ಹಾಗೆ ಅಂದುಕೊಂಡಿಲ್ಲ. ನಾವು ಹೇಗೆ ಚಿತ್ರ ಮಾಡ್ತೀವಿ ಅನ್ನೋದರ ಮೇಲೆ ಅದು ನಿಂತಿದೆ. ಚಂದ್ರ ಸಿನಿಮಾದಲ್ಲಿ ಹೀರೋಯಿನ್ ಅನ್ನು ನಾನು ಎಷ್ಟು ರೊಮ್ಯಾಂಟಿಕ್ ಆಗಿ ತೋರಿಸಿದೆನೆಂದರೆ ಸ್ವತಃ ರವಿಚಂದ್ರನ್ ಅದನ್ನು ಹೊಗಳಿದರು. ಹುಡುಗೀರು ಇಷ್ಟೇ ಮಾಡೋದು ಅಂತ ಒಂದು ಚೌಕಟ್ಟು ಇದೆ ನಿಜ. ಆ ಚೌಕಟ್ಟು ಮೀರಿಯೂ ನಾವು ಸಿನಿಮಾ ಮಾಡಬಹುದು' ಎನ್ನುತ್ತಾರೆ ರೂಪಾ.

ಸಿನಿಮಾ ಕುಟುಂಬದ ಹಿನ್ನೆಲೆ ಇದ್ದವರಿಗೂ ಈ ಕಷ್ಟ ತಪ್ಪಿದ್ದಲ್ಲ ಎನ್ನಿಸುತ್ತೆ. ವಿಜಯಲಕ್ಷ್ಮೀ ಸಿಂಗ್ ಅವರ ಅನುಭವಗಳೂ ಇದನ್ನೇ ಹೇಳುತ್ತವೆ. ಸೋದರ ರಾಜೇಂದ್ರಸಿಂಗ್ ಬಾಬು, ಗಂಡ ಜೈಜಗದೀಶ್ ಇಬ್ಬರೂ ಸಿನಿಮಾರಂಗದಲ್ಲಿ ಸಕ್ರಿಯವಾಗಿರುವವರು. ಸ್ವತಃ ವಿಜಯಲಕ್ಷ್ಮಿ ಸಿಂಗ್ ಚಿಕ್ಕಂದಿನಿಂದಲೇ ಸಿನಿಮಾ ವಾತಾವರಣದಲ್ಲಿ ಬೆಳೆದು ಉದ್ಯಮದ ಒಳಹೊರಗನ್ನು ನೋಡಿದವರು. ಸಿನಿಮಾದಲ್ಲಿ ಇರುವ ಪುರುಷ ಧೋರಣೆಯ ಅನುಭವ ಅವರಿಗೂ ಆಗಿದೆ. 'ವಿಷ್ಣುವರ್ಧನ್ ಅವರ ಜತೆಗೆ ಕೆಲಸ ಮಾಡಿದಾಗಲೂ ನನಗೆ ಈ ಅನುಭವ ಆಗಿದೆ. ಅವರು ಒಂದು ದೃಶ್ಯವನ್ನು ನೋಡುವ ವಿಧಾನವೇ ಬೇರೆ. ನಾನು ಹೆಣ್ಣುಮಗಳಾಗಿ ಅದನ್ನು ನೋಡುವ ವಿಧಾನವೇ ಬೇರೆ. ಆದರೆ ಅವರು ನನಗೆ ಸಾಕಷ್ಟು ಕ್ಲೋಸ್ ಇದ್ದುದರಿಂದ ಸಮಸ್ಯೆ ಆಗಲಿಲ್ಲ. ಕೊನೆಗೆ ನಾನು ಮಾಡಿದ ದೃಶ್ಯವನ್ನೇ ಅವರು ಡಬ್ಬಿಂಗ್‌ನಲ್ಲಿ ನೋಡಿ ಮೆಚ್ಚಿಕೊಂಡರು' ಎಂದು 'ಈ ಬಂಧನ'ದ ಸನ್ನಿವೇಶವೊಂದನ್ನು ಅವರು ನೆನಪಿಸಿಕೊಳ್ಳುತ್ತಾರೆ.

ಅನನ್ಯಾ ಕಾಸರವಳ್ಳಿ ಅವರದ್ದು ಇನ್ನೊಂದು ರೀತಿಯ ಅವಲೋಕನ. 'ಪ್ರತಿಭೆಗೆ ಜೆಂಡರ್ ವ್ಯತ್ಯಾಸ ಇಲ್ಲ. ಹೆಣ್ಣುಮಕ್ಕಳಿಗೆ ಎಲ್ಲ ರೀತಿಯ ಸಿನಿಮಾ ಮಾಡಲು ಬರುವುದಿಲ್ಲ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಗಂಡಸರಷ್ಟೇ ಪ್ರತಿಭೆ ಹೆಣ್ಣುಮಕ್ಕಳಲ್ಲೂ ಇದೆ. ಪುರುಷಕೇಂದ್ರಿತ ಧೋರಣೆ ಇರುವುದರಿಂದ ಮಹಿಳೆಯರಿಗೆ ನಿರ್ದೇಶನಕ್ಕೆ ಹೆಚ್ಚು ಅವಕಾಶ ಸಿಗುತ್ತಿಲ್ಲ ಎನ್ನುವುದು ನಿಜ' ಎನ್ನುತ್ತಾರೆ ಅನನ್ಯ.

ಆದರೆ ಅವರ ಪ್ರಕಾರ ಅವರು ಉಳಿದ ನಿರ್ದೇಶಕಿಯರಿಗಿಂತ ಲಕ್ಕೀ. 'ನನಗೆ ಬಸಂತ್‌ಕುಮಾರ್ ಪಾಟೀಲರಂತಹ ಒಳ್ಳೆಯ ಸದಭಿರುಚಿಯ ನಿರ್ಮಾಪಕರು ಸಿಕ್ಕಿದರು. ಅಫ್‌ಕೋರ್ಸ್ ನನ್ನ ತಂದೆಯ ಸಂಪರ್ಕವೂ ನನಗೆ ನೆರವಾಗಿದೆ. ಈಗ ಇನ್ನೂ ಒಂದು ಸಿನಿಮಾ ಮಾಡಲು ಬಸಂತ್ ಸರ್ ಒಪ್ಪಿಕೊಂಡಿದ್ದಾರೆ' ಎನ್ನುತ್ತಾರೆ ಅನನ್ಯಾ. ಹಾಗೆ ನೋಡಿದರೆ ಮೊದಲ ಸಿನಿಮಾದಲ್ಲಿ ಅನನ್ಯಾ ಅವರಿಗೆ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತಹ ಸನ್ನಿವೇಶವೂ ನಿರ್ಮಾಣವಾಗಲಿಲ್ಲ. ಅದಕ್ಕೆ ಕಾರಣ ಅವರ ಜತೆಗೆ ತಂತ್ರಜ್ಞರಾಗಿ ದುಡಿದವರೆಲ್ಲ ಅವರ ಬಹುಕಾಲದ ಸ್ನೇಹಿತರೇ. 'ಸಂವರ್ಥ ಸಾಹಿಲ್, ಬಾಲಾಜಿ ಮನೋಹರ್ ಎಲ್ಲರೂ ನನಗೆ ಚೆನ್ನಾಗಿ ಪರಿಚಯವಿದ್ದವರು, ಎಲ್ಲವೂ ನಾನು ಅಂದುಕೊಂಡಂತೆಯೇ ಬಂದಿದೆ' ಎಂದು ನಗುತ್ತಾರೆ ಅವರು.

ಗಾಂಧಿನಗರದಲ್ಲಿ ನಿರ್ದೇಶಕಿಯರೆಲ್ಲ ಸೇರಿ ಇಂತಹ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತಾರೆಯೆ? ಅವರದ್ದೇ ಆದ ತಂಡ ಕಟ್ಟಿಕೊಂಡು ಸಮಸ್ಯೆಗಳನ್ನು ಎದುರಿಸಲು ಪರಸ್ಪರ ನೆರವಾಗುತ್ತಾರೆಯೆ? ಫಿಲಂ ಚೇಂಬರ್, ನಿರ್ದೇಶಕರ ಸಂಘಗಳಲ್ಲಿ ಗುರುತಿಸಿಕೊಂಡು ತಮ್ಮ ಬಲ ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲವೆ?

ಈ ಪ್ರಶ್ನೆಗೆ ಒಬ್ಬೊಬ್ಬರದೂ ವಿಭಿನ್ನ ಉತ್ತರ! ''ಸಾರ್, ಕನ್ನಡದಲ್ಲಿ

'ಹರಿಕಥಾ ಪ್ರಸಂಗ'ದ ಒಂದು ದೃಶ್ಯ. ನಿರ್ದೇಶಕಿ ಅನನ್ಯಾ ಕಾಸರವಳ್ಳಿ (ಬಲಚಿತ್ರ)



